ಪೋಸ್ಟ್ ಮಾರ್ಟಮ್ ರಿಪೋರ್ಟ್ ಬಂದಿದೆ. ಅದಕ್ಕೆ ಬಿ.ರಿಪೋರ್ಟ್ has been filed on 19.2.1997. ಆಮೇಲೆ ಏಷಿಯನ್ ಏಜ್ ಬಗ್ಗೆ...

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಬೇರೆ ಕೇಸಿಗೆ ಸಂಬಂಧಪಟ್ಟಿದ್ದು. ಏಕೆಂದರೆ ಇದನ್ನು ಈಗಾಗಲೇ ಪ್ರಸ್ತಾಪಮಾಡಿತ್ತು. ರಾಮಸ್ವಾಮಿಯವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಡೀಟೈಲ್ಡ್ ಎನ್‌ಕ್ವೈರಿ ನಡೆಯಬೇಕು ಎಂದು ಹೇಳಿ ಸದನದಲ್ಲಿ ಚರ್ಚೆಯಾಗಿದೆ. ಅದಕ್ಕೆ ಇದು ರಿಪ್ಲೈ ಸರಿಹೋಗುವುದಿಲ್ಲ. ಅದರ ಎನ್‌ಕ್ವೈರಿಯನ್ನು ಮಾಡಬೇಕಾಗುತ್ತದೆ. ಏಕೆ ಬಿ.ರಿಪೋರ್ಟ್ ಫೈಲ್ ಆಯಿತು? ಮತ್ತು ಹಾರ್ಟಿಕಲ್ಚರ್ ಮಿಸ್ ಅಪ್ರೊಪ್ರಿಯೇಷನ್ ಫಂಡ್ಸ್ ಏನು ಇದೆ, ಅದಕ್ಕೂ ಇದಕ್ಕೂ ಲಿಂಕ್ ಏನು ಇದೆ, ಅದು ಕರೆಕ್ಟ್ ಇದೆ.

ಶ್ರೀ ವಾಟಾಳ್ ನಾಗರಾಜ್: ಈಗ ಮಲ್ಲಣ್ಣನ ಕೇಸ್ ಬೇರೆ. ಇವತ್ತು ಟೈಮ್ಸ್ ಆಫ್ ಇಂಡಿಯಾ ಸರ್ಕ್ಯುಲೇಷನ್ ಮ್ಯಾನೇಜರ್ ಕೊಲೆಯಾಗಿರುವುದು ಬೇರೆ. ಇದರ ಜೊತೆಗೆ ಏಷಿಯನ್ ಏಜ್ ಪತ್ರಿಕೆಯಲ್ಲಿ ನಡೆದಂಥ ಘಟನೆ ಬಗ್ಗೆ ತಾವು ಹೇಳಬೇಕು.

ಶ್ರೀ ಆರ್.ರೋಷನ್ ಬೇಗ್: ಏಷಿಯನ್ ಏಜ್ ಬಗ್ಗೆ ಹೇಳುವುದಾದರೆ ಈಗಾಗಲೇ 12 ಜನರನ್ನು ಪೋಲೀಸ್‌ನವರು ಅರೆಸ್ಟ್ ಮಾಡಿದ್ದಾರೆ. ಅವರ ಮೇಲೆ ಛಾರ್ಜ್‌ಸೀಟನ್ನು ಹಾಕಿದ್ದಾರೆ. ಛಾರ್ಜ್ ಸೀಟ್ ಹಾಕಿ ಅವರನ್ನು ಈಗ ಜ್ಯುಡಿಷಿಯಲ್ ಕಸ್ಟಡಿಗೆ ಕೂಡ ರಿಮ್ಯಾಂಡ್ ಮಾಡಿದ್ದಾರೆ.

(9) ವಿಷಯ: ರೈತರ ಆತ್ಮಹತ್ಯೆ ಬಗ್ಗೆ ಸದನದ ಸಮಿತಿಯ ವರದಿ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): 23ನೇ ತಾರೀಖು ಇವತ್ತು ಆತ್ಮಹತ್ಯೆ ಮಾಡಿಕೊಂಡ ರೈತರ ಬಗ್ಗೆ ಇವತ್ತು ಇಲ್ಲಿ ವರದಿಯನ್ನು ಮಂಡಿಸುತ್ತೇವೆ ಎಂದು ಹೇಳಿದಿರಿ. ಇದೇ ಸದನದಲ್ಲಿ ಇಲ್ಲೆಲ್ಲಾ ಧರಣವಾದ ನಂತರ ಒಂದು ತೀರ್ಮಾನಕ್ಕೆ ಬಂದರು. ಇದು ಬಹಳ ಗಂಭೀರವಾದ ಪ್ರಶ್ನೆ. ಇದನ್ನು ಸರ್ಕಾರ ಇಷ್ಟೊಂದು ಲಘುವಾಗಿ ಇವತ್ತು ವರದಿಯನ್ನು ಮಂಡಿಸದೆ ನಾವು ಬೆಳಿಗ್ಗೆಯಿಂದ ಕಾದಿದ್ದೇವೆ. ವರದಿ ಬರಬಹುದು ಎಂದು. ಇಷ್ಟೊಂದು ಜವಾಬ್ದಾರಿಯಿಂದ ಹೇಳಿರುವ ಸರ್ಕಾರ ನೇರವಾಗಿ ಈ ರೀತಿ ಮಾಡಿದೆ. ಇದಕ್ಕೆ ಕಾರಣವೇನು? ಇತಿಹಾಸದಲ್ಲಿ ಈ ರೀತಿ ಆತ್ಮಹತ್ಯೆ ಮಾಡಿಕೊಂಡಿರುವುದು ಕರ್ನಾಟಕದ ಇತಿಹಾಸದಲ್ಲಿ ಇರಲಿಲ್ಲ. ಸ್ವಲ್ಪ ಹೆಚ್ಚು ಕಡಿಮೆ ಈ ದೇಶದ ಇತಿಹಾಸದಲ್ಲೂ ಇಲ್ಲ. ಈ ಪರಿಸ್ಥಿತಿಯನ್ನು ಇಷ್ಟು ಲಘುವಾಗಿಸಿಕೊಂಡು ವರದಿಯನ್ನು ಮಂಡಿಸದೇ ಇರುವುದು ಇದು ಸರಿಯಾದ ನೀತಿಯಲ್ಲ. ಅದಕ್ಕೆ, ಸರ್ಕಾರ ಭರವಸೆ ಕೊಟ್ಟ ರೀತಿಯಲ್ಲಿ, ಇವತ್ತು ವರದಿಯನ್ನು ಮಂಡಿಸಲೇಬೇಕು.

ಉಪಾಧ್ಯಕ್ಷರು: ಸರ್ಕಾರ ವರದಿ ಸಲ್ಲಿಸುವುದಿಲ್ಲ. ಸದನದ ಸಮಿತಿ ಅಧ್ಯಕ್ಷರು ವರದಿ ಸಲ್ಲಿಸುತ್ತಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಬಹಳಷ್ಟು ಚರ್ಚೆಯಾದ ಮೇಲೆ ಕೊನೆಗೆ 23ನೇ ತಾರೀಖು ಮಂಡಿಸುತ್ತೇನೆಂದು ಅವರು ಒಪ್ಪಿಕೊಂಡಿದ್ದುದು. ಸೋಮವಾರದ ದಿವಸವೇ ಮಂಡಿಸಬೇಕೆಂದು ನಾವೆಲ್ಲರೂ ಒತ್ತಾಯಿಸಿದ್ದೆವು. ಕೊನೆಗೆ, ಅವರು ಸಮಯ ತೆಗೆದುಕೊಂಡರು. ಶ್ರೀ ನಾಣಯ್ಯನವರೂ ಕೂಡ ಹೇಳಿದರು. ಹೇಳಿದ ಮೇಲೆ, 23ರವರೆಗೆ ಸಮಯ ತೆಗೆದುಕೊಂಡು, ಅದನ್ನು ಮಂಡಿಸುತ್ತೇವೆಂದು ಒಪ್ಪಿಕೊಂಡರು. ಆದರೆ, ಇವತ್ತಾದರೂ ಮಧ್ಯಂತರ ವರದಿಯನ್ನು ಮಂಡಿಸುತ್ತಾರೆಂದು ಅಂದುಕೊಂಡಿದ್ದೆವು, ಆದರೆ ಅವರು ಅದರ ಬಗ್ಗೆ ಪ್ರಸ್ತಾಪ ಮಾಡಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಇನ್ನೂ ಆತ್ಮಹತ್ಯೆಗಳಾಗುತ್ತಿವೆ. ಸದನ ಸಮಿತಿ ಮಾಡಿದ್ದಕ್ಕೆ ಏನೂ ಬೆಲೆ ಸಿಗುವುದಿಲ್ಲ. 23ನೇ ತಾರೀಖಿನಂದು ಮಂಡಿಸುತ್ತೇನೆಂದು ಹೇಳಿದ್ದರು.

ಶ್ರೀ ಎಂ.ಸಿ.ನಾಣಯ್ಯ (ಸಂಸದೀಯ ವ್ಯವಹಾರಗಳ ಸಚಿವರು): ಸಭಾಧ್ಯಕ್ಷರೊಡನೆ ಚರ್ಚಿಸುವಾಗ ಅಲ್ಲಿ ಒಪ್ಪಿಕೊಂಡು ಬರುತ್ತೀರಿ, ಸದನದಲ್ಲಿ ಹೇಳುತ್ತೀರಿ. ಇದು ಸದನ ಸಮಿತಿ. ಸದನದ ಸಮಿತಿಯವರು ಸಭಾಧ್ಯಕ್ಷರೊಡನೆ ಚರ್ಚಿಸುವಾಗ ಎಲ್ಲಾ ಪಕ್ಷಗಳವರೂ ಅಂದರೆ ಬಹುಶಃ ತಾವು ಇದ್ದಿರಿ ಎಂದು ಕಾಣುತ್ತದೆ. ಇವತ್ತು ಬೆಳಿಗ್ಗೆ ಕೂಡ ಸಭಾಧ್ಯಕ್ಷರ ಜೊತೆಯಲ್ಲಿ ಇದೇ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದರು. ಸದನದ ಸಮಿತಿಯ ಸದಸ್ಯರು, ಕಾಂಗ್ರೆಸ್, ನಮ್ಮ ಪಕ್ಷದವರು, ಬಿಜೆಪಿಯ ಶ್ರೀ ರಾಮದಾಸ್‌ರವರು ನಿನ್ನೆ ಚರ್ಚೆ ಮಾಡುತ್ತಿದ್ದರು. ಆ ಸಂದರ್ಭದಲ್ಲಿ, ಸಭಾಧ್ಯಕ್ಷರು ಅವರ ಜೊತೆಯಲ್ಲಿ ಚರ್ಚೆ ಮಾಡಿ, ಈ ಸದನದ ವರದಿಯನ್ನು ಇವತ್ತು ಕೊಡುತ್ತಿರುವ ಬಗ್ಗೆ ಒಂದು ದಿವಸ ಸಮಯ ಬೇಕೆಂದು ಕೇಳುತ್ತಿದ್ದರು. ಇದರ ಬಗ್ಗೆ ಸಭಾಧ್ಯಕ್ಷರು ಸದನದಲ್ಲಿ ಹೇಳಿದ್ದಾರೆಂದು ನಾನು ಅಂದುಕೊಂಡಿದ್ದೆ. ನಾಳೆ ಬರುತ್ತಾರೆ. ಅವರು ಸದಸ್ಯರೊಡನೆ ಏನು ಚರ್ಚೆ ಮಾಡಿದ್ದಾರೆ ಅದರ ಬಗ್ಗೆ ತಿಳಿಸುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ಈ ಸದನದಲ್ಲಿ ಚರ್ಚೆಯಾಗಿ, ಆಶ್ವಾಸನೆ ಕೊಟ್ಟಿದ್ದಕ್ಕೆ ಬೆಲೆ ಏನು ಉಳಿಯುತ್ತದೆ?

ಶ್ರೀ ಎಂ.ಸಿ.ನಾಣಯ್ಯ: ಸದನದ ಸಮಿತಿ ಎಂದು ಹೇಳುತ್ತಿರುವುದು, ಸದನದಿಂದ ರಚಿತವಾಗಿರುವುದು ಇದು. ಇದು ಸದನದ ಪರಮೋಚ್ಚ ಅಧಿಕಾರ ಹೊಂದಿದೆ. ಇದಕ್ಕೆ ಸರ್ಕಾರ ಅಡ್ಡ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: 23ನೇ ತಾರೀಖಿನಂದು ವರದಿಯನ್ನು

ಮಂಡಿಸುತ್ತೇವೆಂದು ಹೇಳಿದ್ದರು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸದನ ಸಮಿತಿಯ ಅಧ್ಯಕ್ಷರು ಆಶ್ವಾಸನೆ ಕೊಟ್ಟಿದ್ದರು.

ಉಪಾಧ್ಯಕ್ಷರು: ಸದನ ಸಮಿತಿಯವರು ಹೋಗಿ ಅಧ್ಯಕ್ಷರೊಡನೆ ಮಾತನಾಡಿದ್ದಾರೆ. ಅವರೇನು ಮಾತನಾಡಿದ್ದಾರೆಂಬುದು ನನಗೆ ಗೊತ್ತಿಲ್ಲ. ಅತಿ ಜರೂರು ಕೆಲಸಕ್ಕೆ ಅಧ್ಯಕ್ಷರು ಹೊರಗಡೆ ಹೋಗಿದ್ದಾರೆ. ನಾಳೆ ಬೆಳಿಗ್ಗೆ ಇದರ ಬಗ್ಗೆ ತಮಗೆ ವಿಷಯ ಗೊತ್ತಾಗುತ್ತದೆ. ತಾವು ಒತ್ತಾಯ ಮಾಡಿದ್ದೀರಿ. ತಾರೀಖು ನಿಗದಿ ಮಾಡಿದ್ದೀರಿ. ನಾನೂ ಆಗ ಇದ್ದೆ. ಆದರೆ, ಅಧ್ಯಕ್ಷರೊಡನೆ ಏನು ಸಮಾಲೋಚನೆ ಮಾಡಿದ್ದಾರೆಂಬುದು ನಮಗೆ ಗೊತ್ತಿಲ್ಲ. ಅವರು ಬಂದ ಮೇಲೆ ಸ್ಪಷ್ಟ ಚಿತ್ರಣ ಸಿಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸರ್ಕಾರದ ಮೇಲೆ ನಾವು ಆರೋಪ ಮಾಡುತ್ತಿಲ್ಲ. ಏಕೆಂದರೆ, ಇದು ಸದನ ಸಮಿತಿ. ಸದನದ ಎಲ್ಲಾ ಪಕ್ಷದ ಸದಸ್ಯರೂ ಕೂಡ ಇದರಲ್ಲಿ ಇದ್ದ ಕಾರಣ, ಅವರು ಸದನಕ್ಕೆ ವಿವರ ಕೊಡಬೇಕು. ಆದರೆ, ವರದಿಯನ್ನು ಕೊಡಿಸುವ ಜವಾಬ್ದಾರಿ ಕೂಡ ಅಧ್ಯಕ್ಷರದೆ. ಏಕೆಂದರೆ, ಸೆಂಟ್ರಲ್ ಟೀಂ ಬಂದು ಹೋಗುತ್ತಿದೆ. ಏನಾದರೂ ರಿಲೀಫ್ ಸಿಗುತ್ತದೆನ್ನುವ ದೃಷ್ಟಿಯಿಂದ ಮಧ್ಯಂತರ ವರದಿ ಕೇಳಿದ್ದು.

ಉಪಾಧ್ಯಕ್ಷರು: ಅಧ್ಯಕ್ಷರು ತುರ್ತು ಕೆಲಸದ ಮೇಲೆ ಹೊರಗಡೆ ಹೋಗಿದ್ದಾರೆ. ನಾಳೆ ಬರುತ್ತಾರೆ. ಇದರ ಬಗ್ಗೆ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಆದಷ್ಟು ಬೇಗ ನಿಮಗೆ ವರದಿಯನ್ನು ಕೊಡಿಸುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಯಾವ ಅಧ್ಯಕ್ಷರು ಸದನಕ್ಕೆ ಆಶ್ವಾಸನೆ ಕೊಟ್ಟಿದ್ದಾರೋ, ಅವರಾದರೂ ಸದನಕ್ಕೆ ಬಂದು ನಮ್ಮ ಕಷ್ಟ ಈ ರೀತಿ ಇದೆ, ನಮ್ಮ ಪರಿಸ್ಥಿತಿ ಹೀಗಿದೆ, ಹೇಳಿದ್ದದ್ದು ನಿಜ, ಆದ್ದರಿಂದ ನಮಗೆ ಸಮಯ ಬೇಕೆಂದು ಕೇಳಬೇಕಲ್ಲವೇ?

(ಗೊಂದಲ)

ಉಪಾಧ್ಯಕ್ಷರು: ನಾನೂ ಅದನ್ನೇ ಹೇಳುತ್ತಿದ್ದೇನೆ. ಅಧ್ಯಕ್ಷರೊಡನೆ ಅವರು ಮಾತನಾಡಿದ್ದಾರೆ. ಅದರ ಬಗ್ಗೆ ನಮಗೆ ಗೊತ್ತಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರು ಸದನಕ್ಕೆ ಆಶ್ವಾಸನೆ ಕೊಟ್ಟಿದ್ದರು.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಈ ಸದನದಲ್ಲಿ ಯಾರೇ

ಮಂತ್ರಿಗಳಿಲ್ಲದಿದ್ದಾಗ, ಶ್ರೀ ನಾಣಯ್ಯನವರು ಉತ್ತರಕೊಡುತ್ತಾರೆ. ಇದಕ್ಕೂ ಅವರೇ ಉತ್ತರ ಕೊಡಬೇಕು.

ಉಪಾಧ್ಯಕ್ಷರು: ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಉದ್ಯೋಗಿಯ ಬಗ್ಗೆ ಹೇಳಿದಿರಿ, ಉತ್ತರ ಕೊಡಿಸಿದ್ದೇವೆ. ಸಮಯದ ಅಭಾವದಿಂದ ಎಲ್ಲೋ ಹೊರಗಡೆ ಹೋಗಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಇದರ ಗಾಂಭೀರ್ಯತೆ ಏನು? ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಈ ರೀತಿಯಾಗಿ ಆಗಿಲ್ಲ. ವರದಿ ಕೊಡುವುದು ಇಷ್ಟು ತಡವಾಗಿದೆ. ಜಂಟಿ ಸದನ ಸಮಿತಿಗೆ ರಚಿಸಿದ್ದು ಏಕೆ? ಯಾವ ಉದ್ದೇಶಕ್ಕೆ? 15 ದಿವಸಗಳಲ್ಲಿ ವರದಿಯನ್ನು ಕೊಡಬೇಕೆಂದು ಇದೆ.

ಉಪಾಧ್ಯಕ್ಷರು: ಅದಕ್ಕೆ ಯಾರ ವಿರೋಧವೂ ಇಲ್ಲ. ಎಲ್ಲರಿಗೂ ಬೇಕಾದ ವಿಷಯ ಅದು. ಸಮಯದ ಅಭಾವದ ಸಲುವಾಗಿ ಹೇಳಿದ್ದಾರೆ. ಇಷ್ಟು ಬೆಳೆಸುವುದು ಬೇಡ. ಎಲ್ಲರೂ ಸಹಕರಿಸಿ. ನಾಳೆ ಬೆಳಿಗ್ಗೆ ನಿಮಗೆ ಉತ್ತರ ಕೊಡಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು): ಅವರು ಅಧ್ಯಕ್ಷರೊಡನೆ ಮಾತನಾಡಿದ್ದಾರೆ. ಈಗ ಅಧ್ಯಕ್ಷರು ಇಲ್ಲ. ನಾವು ಅದರ ಬಗ್ಗೆ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಯಾರು ಅಲ್ಲಿ ಮಾತನಾಡಿದ್ದಾರೆನ್ನುವುದು ನಮಗೆ ಯಾರಿಗೂ ಗೊತ್ತಿಲ್ಲ. ನಮಗೆ ಗೊತ್ತಿರುವುದು, ಈ ಸದನದಲ್ಲಿ ಸ್ಪಷ್ಟವಾಗಿ 23ನೇ ತಾರೀಖು ತಾತ್ಕಾಲಿಕ ವರದಿಯನ್ನು ಮಂಡಿಸುತ್ತೇನೆಂದು ಹೇಳಿದ್ದು ಬಿಟ್ಟರೆ, ಇವರು ಖಾಸಗಿಯಾಗಿ ಯಾರ ಹತ್ತಿರ ಮಾತನಾಡಿದ್ದಾರೆಂಬುದು ನಮಗ್ಯಾರಿಗೂ ಗೊತ್ತಿಲ್ಲ.

ಉಪಾಧ್ಯಕ್ಷರು: ಯಾರೋ ಒಬ್ಬರೊಡನೆ ಅಲ್ಲ. ಈ ಸದನದ ಗೌರವಾನ್ವಿತ ಅಧ್ಯಕ್ಷರೊಡನೆ ಮಾತನಾಡಿದ್ದಾರೆ. ಸಮಯದ ಅಭಾವದಿಂದ ಹಾಗಾಗಿದೆ.

ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ): ಜಂಟಿ ಸದನ ಸಮಿತಿ ಆದದ್ದರಿಂದ ಇದು ನಮ್ಮೆಲ್ಲರ ಜವಾಬ್ದಾರಿ. ಅಧ್ಯಕ್ಷರಿಗೆ ಅಥವಾ ಸರ್ಕಾರಕ್ಕೆ ಎಷ್ಟು ಜವಾಬ್ದಾರಿ ಇದೆಯೋ, ನಮ್ಮೆಲ್ಲರದೂ ಅಷ್ಟೇ ಜವಾಬ್ದಾರಿ ಇದೆ. ಆದ್ದರಿಂದ, ವರದಿಯನ್ನು ಇವತ್ತು ಕೊಡುತ್ತೇವೆಂದು ಹೇಳಿದ್ದರು. ಆದುದರಿಂದ, ಇವತ್ತೂ ವರದಿ ಬರಬೇಕಿತ್ತೆಂಬುದು ನಮ್ಮ ಆತಂಕವಿದೆ. ಇದನ್ನು ಪೂರ್ತಿಯಾಗಿ ತಾಂತ್ರಿಕವಾಗಿ ನೋಡುವ ಪ್ರಶ್ನೆಯಲ್ಲ. ಇವತ್ತು ಕೂಡ ವರದಿಯಾಗಿರುವ ಪ್ರಕಾರ, ಅಲ್ಲಿ ಆತ್ಮಹತ್ಯೆಗಳಾಗುತ್ತಿವೆ. ವರದಿ ಕೊಡಲಿ. ಅಧ್ಯಕ್ಷರೊಡನೆ ಏನು ಮಾತನಾಡಿದರೆಂಬುದು ನಮಗೆ ಗೊತ್ತಿಲ್ಲ. ಆ ಬಗ್ಗೆ ನಾನು ಕಾಮೆಂಟ್ ಮಾಡಲು

ತಯಾರಿಲ್ಲ. ನಮ್ಮ ಸಹ ಸದಸ್ಯರಿರುತ್ತಾರೆ. ನಾವು ಆ ಸಮಿತಿ ಬಗ್ಗೆ, ಸದಸ್ಯರ ವರ್ತನೆ ಬಗ್ಗೆ ಪ್ರಶ್ನೆ ಮಾಡುತ್ತಿಲ್ಲ. ಆದರೆ, ಇವತ್ತು ಸರ್ಕಾರ ಏನು ಮಾಡಬೇಕೆಂದರೆ, ತಾವು ಪಾರ್ಲಿಮೆಂಟರಿ ಸಚಿವರಾಗಿದ್ದೀರಿ, ಇದರ ಬಗ್ಗೆ ಸ್ವಲ್ಪ ಮಾನಿಟರ್ ಮಾಡಬೇಕು. ಈ ಸಮಿತಿಯವರು ತಕ್ಷಣ ಕುಳಿತುಕೊಂಡು ತಾತ್ಕಾಲಿಕವಾದ ವರದಿಯನ್ನು ಕೊಡಲು ಹೇಳಬೇಕು. you can always make a request.

SRI M.C.NANAIAH: Power to monitor the deliberations of the Committee, Sir, I am sorry, I think I would be committing the greatest contempt of this House if I do that. I don't know being the Chief Minister and being a such a great parliamentarian trying to say that the Parliamentary Affairs Minister to monitor the deliberations of the Committee. I don't think I have got that power. I don't have the power.

SRI M.VEERAPPA MOILY: Please don't jump at the conclusion.

SRI M.C.NANAIAH: I don't have the power.

SRI M.VEERAPPA MOILY: Please hear me for a while.

SRI M.C.NANAIAH: You cannot say that parliamentary Affairs Minister can monitor. How can I monitor the deliberations of the Committee?

SRI M.VEERPPA MOILY: Allow me to speak. Let me say what I want to say...

ಉಪಾಧ್ಯಕ್ಷರು: ಒಂದು ಸಾರಿ ಸಮಿತಿಗೆ ಅಧಿಕಾರ ಕೊಟ್ಟ ಮೇಲೆ ಕೇಳಬಾರದು.

ಶ್ರೀ ಎಂ.ವೀರಪ್ಪ ಮೊಯ್ಲಿ: ನಿಮಗೂ ಅನುಭವವಿದೆ. Please, why don't you yield, when I am on my legs...

SRI M.C.NANAIAH: Power to monitor...

ಶ್ರೀ ಎಂ.ವೀರಪ್ಪ ಮೊಯಿಲಿ: ತಾವು ಪಾರ್ಲಿಮೆಂಟರಿ ಸಚಿವರಾಗಿ ಈ ತರಹ ಮಾತನಾಡಲಿಕ್ಕೇ ಬಿಡುವುದಿಲ್ಲವೆಂದರೆ ಹೇಗೆ? I am on my legs. Let me represent what I want to represent. Is it the way to conduct...

ಉಪಾಧ್ಯಕ್ಷರು: ಉದ್ವೇಗವೇಕೆ?

ಶ್ರೀ ಎಂ.ವೀರಪ್ಪ ಮೊಯಿಲಿ: ನಾನಲ್ಲ ಉದ್ವೇಗ ಮಾಡಿದ್ದು, ಅವರು. Let me say what I want to say. You have allowed me to say. ಇದರಲ್ಲಿ ಎಕ್ಸೈಟ್‌ಮೆಂಟ್ ಇದೆ. ನಾನೇನು ಹೇಳಿದನೆಂದರೆ, ಪಾರ್ಲಿಮೆಂಟರಿ ಸಚಿವರಿಗೂ ಕರ್ತವ್ಯವಿದೆ. ನಾನೂ ಕೂಡ ಪಾರ್ಲಿಮೆಂಟರಿ ಸಚಿವನಾಗಿ 6-7 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಏನು ಮಾಡುತ್ತಾರೆಂದರೆ, ಸದನದ ಸಮಿತಿ ರಚನೆಯಾದಾಗ, ಆದ್ಯತೆ ಮೇಲೆ ವರದಿ ಕೊಡಲು ಪರ್‌ಸ್ಯೂ ಮಾಡಬೇಕಾಗುತ್ತದೆ, ಬೆನ್ನತಟ್ಟಬೇಕಾಗುತ್ತದೆ, ಏನು ಸಹಕಾರ ಬೇಕೋ ಅದನ್ನು ಕೊಡತಕ್ಕಂಥದ್ದು, it is concerned with that ನಾವು ಹೇಳಲಿಕ್ಕಾಗುತ್ತದೆಯೇ? ಇವತ್ತು ವರದಿಯನ್ನು ಕೊಡಲಿಲ್ಲವೆಂದರೆ, ಏಕೆ ಕೊಡಲಿಲ್ಲವೆಂದು ನೀವು ಬೇರೆ ಕೆಲಸ ಮಾಡದೆ, ಅದೇ ಕೆಲಸ ಮಾಡಬೇಕಾಗಿತ್ತು. ಅದಕ್ಕೆ ಮೊದಲ ಆದ್ಯತೆ ಕೊಡಬೇಕಾಗಿತ್ತು. you have to monitor. Why not? ಮಾನಿಟರ್ ಅಂದರೆ ಇದೇ ತರಹ ವರದಿ ಕೊಡತಕ್ಕದ್ದೆಂದು ಅಲ್ಲ. ವರದಿ ಕೊಡಬೇಕೆಂಮ ಜವಾಬ್ದಾರಿ ಇರುವಾಗ ಆ ಸಮಿತಿಯವರಿಗೆ ರಿಮೈಂಡ್ ಮಾಡಬೇಕು. ಏಕೆಂದರೆ, ಇದು ಬಹಳ ಪ್ರಮುಖವಾದ ಪ್ರಶ್ನೆ, ಸರ್ಕಾರವೂ ಈ ವರದಿಗಾಗಿ ಕಾದು ಕುಳಿತಿದೆ ಎಂದು ಹೇಳಬೇಕು. because the anxiety is not only on the part of the Members but also on the part of the Government,... ಏಕೆಂದರೆ, ವರದಿಯನ್ನು ನಾಳೆ ಕೊಡಲಿ- ಅಥವಾ ಕೊಡದಿದ್ದರೆ, ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಆತ್ಮಹತ್ಯೆ ಪ್ರಸಂಗ ನಡೆಯುತ್ತಲೇ ಇದೆ, ಮಾಮೂಲಿಯಾಗಿ ಇಂಥ ಪ್ರಸಂಗ ನಡೆದಾಗ ಕೆಲಾಮಿಟಿ ಎಂದು ಟ್ರೀಟ್ ಮಾಡಬೇಕೇ ಹೊರತು ನಾರ್ಮಲ್ ಆಗಿ ನೋಡತಕ್ಕ ವಿಚಾರವಲ್ಲ. ನೀವು 1-1 ಲಕ್ಷ ಪರಿಹಾರವನ್ನಾದರೂ ಅವರ ಸಂಬಂಧಿಕರಿಗೆ ಡಿಕ್ಲೇರ್ ಮಾಡಬೇಕು. ಅದನ್ನು ನಾಳೆ ಮಾಡಿ. ವರದಿ ಬರಲಿ. ತಾತ್ಕಾಲಿಕ ವರದಿ ಬರದಿದ್ದರೂ ಪರಿಹಾರ ಕೊಡಬೇಕಾದುದು ಒಂದು ನಾಗರಿಕ ಸರ್ಕಾರದ ಕರ್ತವ್ಯ. ತಮ್ಮಲ್ಲಿ ಸಂಬಂಧಪಟ್ಟ ತಾತ್ಕಾಲಿಕ ವರದಿ, ನೀವು ತರಿಸಿದ ವರದಿ, ವಸ್ತುಸ್ಥಿತಿ ಪರಿಚಯವೂ ಇದೆ. ಆದುದರಿಂದ, ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಿ. ಬೇರೆ ಕನ್‌ಸಮೆಟೀವ್ ಎಂದು ಯಾರು ಇವತ್ತು ಮನೆಯಲ್ಲಿ ಕಷ್ಟದಲ್ಲಿ ಇದ್ದಾರೆ, ಅವರಿಗೆಲ್ಲಾ ಕನ್‌ಸಮೆಟೀವ್ ಆಗಿ ನಾವು ಅದನ್ನು ಕೊಟ್ಟಿದ್ದೇವೆ. 1971ರಲ್ಲಿ ಒದಗಿದಂಥ

ಬರಗಾಲದ ಪರಿಸ್ಥಿತಿಯಲ್ಲಿ ನಾವು ಕನ್‌ಸಮ್‌ಟೀವ್ ಮೇನ್ ಎಂದು ಸಪರೇಟ್ ಆಗಿ ಪರಿಹಾರವನ್ನು ಕೊಟ್ಟಿದ್ದೇವೆ. ಆ ರೈತರಿಗೆ ತಾತ್ಕಾಲಿಕವಾದ ಪರಿಹಾರವನ್ನು ಕನ್‌ಸಮ್‌ಟೀವ್ ಲೋನ್ ಕೊಟ್ಟಿದ್ದೇವೆ. ಇಂತಹ ಕಾರ್ಯವನ್ನು ತಾವು ದಯಮಾಡಿ ಮಾಡಬೇಕು. ಮಾನವೀಯತೆಯ ದೃಷ್ಟಿಯಿಂದ ನಾಳೆ ಇದನ್ನು ಮಾಡಿ. ತಾಂತ್ರಿಕವಾದ ವರದಿ ಬೇಕಾಗಿಲ್ಲ. ವರದಿ ಬರಬೇಕು, ಬಂದಾದನಂತರ ನಾವು ಕುಳಿತುಕೊಳ್ಳಬೇಕು, ನಂತರ ಸಿಓಡಿ ವರದಿ ಮಾಡಿದ್ದೇವೆ ಇವು ಎಲ್ಲ ಏಕೆ? ಜಿಲ್ಲಾ ಮಟ್ಟದಲ್ಲಿ ಈ ಆತ್ಮಹತ್ಯೆ ಪ್ರಕರಣ ಸಂಭವಿಸಿರುವುದರಿಂದ ಅಲ್ಲಿನ ಜಿಲ್ಲಾಧಿಕಾರಿಗಳಿಗೆ ಇದು ಅಗಿದಿಯೋ, ಇಲ್ಲವೋ ಎನ್ನುವುದು ಗೊತ್ತಿರುತ್ತದೆ.. ಇದಕ್ಕೆ ಏಕೆ ಸಿಒಡಿ ವರದಿ ಕೊಡಬೇಕು. ಏಕೆಂದರೆ ಇದು ಕ್ರಿಮಿನಲ್ ದಾಖಲೆ ಆಲ್ಲ. ದಯವಿಟ್ಟು ಆಲೋಚನೆ ಮಾಡಿ, ರೈತರು ಮಾಡಿದಂತಹ ಏನು ಕೆಲಾಮಿಟಿಯಾಗಿದೆ ಅದಕ್ಕೆ ಸಂಬಂಧಪಟ್ಟಿರತಕ್ಕಂಥದ್ದು. ಇದಕ್ಕೆ ಸಿಒಡಿ ವರದಿ ಬೇಕಾಗಿಲ್ಲ, ಸಿಒಡಿ ವರದಿಯನ್ನು ಬೇರೆಯದಕ್ಕೆ ಉಪಯೋಗಿಸಿ. ಆದರೆ ತಾತ್ಕಾಲಿಕವಾದ ವರದಿಯನ್ನು, ಪರಿಹಾರವನ್ನು ನಾಳೆ ಘೋಷಣೆ ಮಾಡಬೇಕು. ಇಲ್ಲದಿದ್ದರೆ ದಿನನಿತ್ಯ ಸರಣಿ ಆತ್ಮಹತ್ಯೆ ನಡೆಯುವ ಪ್ರಸಂಗ, ಅವರು ಹೇಳಿದಂತೆ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಆಗಿಲ್ಲ. ತಮಗೆ ಗೊತ್ತಿರುವ ಹಾಗೆ, 1993ರಲ್ಲಿ ನಮ್ಮ ರೈತರ ಆಲೂಗಡ್ಡೆ, ಆಂಧ್ರಪ್ರದೇಶದಲ್ಲಿ ಕೋಲ್ಡ್‌ಸ್ಟೋರೇಜ್‌ನಲ್ಲಿ ಹಾಳಾಯಿತು ಎಂದು ನಾವು ತಕ್ಷಣವೇ 35 ಲಕ್ಷ ಪರಿಹಾರವನ್ನು ಘೋಷಣೆ ಮಾಡಿದೆವು. ಅಲ್ಲಿ ಯಾವುದೂ ಆತ್ಮಹತ್ಯೆ ನಡೆದಿರಲಿಲ್ಲ. ತೊಗರಿ ಬೆಳೆ ಹಾನಿಯಾದಾಗ 11 ಕೋಟಿ ರೂ.ಗಳ ಘೋಷಣೆ ಮಾಡಿದೆವು. ಸನ್‌ಫ್ಲವರ್ ಹಾನಿಯಾದಾಗ ಕೂಡ 7 ಕೋಟಿ ರೂ.ಗಳನ್ನು ಘೋಷಣೆ ಮಾಡಿದೆವು. ಇದಕ್ಕೆ ದಯವಿಟ್ಟು ಕೊನೇಪಕ್ಷ ನೀವು 5 ಕೋಟಿ ರೂ.ಗಳನ್ನು ರಿಲೀಫ್ ಮಾಡಿ, ಅದರಲ್ಲಿ ಯಾರಿಗೆ ಪರಿಹಾರ ಕೊಡಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಬಿಟ್ಟು ಬಿಡಿ. ಇಷ್ಟು ನೀವು ಮಾಡದಿದ್ದರೆ, ನಿಮ್ಮ ಕರ್ತವ್ಯ ನಿರ್ವಹಣೆ ಮಾಡುವುದಕ್ಕೆ ಆಗುವುದಿಲ್ಲ. ತಾಂತ್ರಿಕವಾಗಿ ವರದಿ ಬರಬೇಕೆಂದು ಒಂದು ಪ್ರತಿಷ್ಠೆಯ ಮೇಲೆ ತಾವು ದಯಮಾಡಿ ಕಾಯಬೇಡಿ. ತಕ್ಷಣವೇ ಒಂದು 5 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ. ಅದನ್ನು ಜಿಲ್ಲಾಧಿಕಾರಿಗಳ ಕಸ್ಟೋಡಿಯಲ್ಲಿ ಕೊಟ್ಟು ಯಾವ ರೀತಿಯಲ್ಲಿ ಉಪಯೋಗ ಮಾಡಬೇಕೆಂದು ಬ್ರಾಡ್ ಆಗಿ ಒಂದು ಹೆಡ್‌ಲೈನ್ ಕೊಡಿ. ಆದರೆ ತಾತ್ಕಾಲಿಕ ಪರಿಹಾರ ಮಾತ್ರ ನಾಳೆ ಘೋಷಣೆ ಮಾಡಿ.. ತಾತ್ಕಾಲಿಕ ವರದಿ ಅಷ್ಟೇ ಅಲ್ಲ ತಾತ್ಕಾಲಿಕ ಪರಿಹಾರದ ಪ್ಯಾಕೇಜನ್ನು ಸರ್ಕಾರ ಘೋಷಣೆ ಮಾಡಬೇಕು. ಸರಣಿ ಆತ್ಮಹತ್ಯೆ ನಡೆಯುತ್ತಿರುವುದರಿಂದ ಅಲ್ಲೋಲಕಲ್ಲೋಲವಾಗಿರುವ ಪ್ರದೇಶಗಳಲ್ಲಿ ಸಾಂತ್ವನಗೊಳಿಸತಕ್ಕಂಥ ಕ್ರಮಗಳನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ (ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಮೊಯ್ಲಿಯವರು ಹೇಳಿರುವಂತೆ, ಸದನ ಸಮಿತಿ ವರದಿ ಬಾರದೆ ಹೋದರೂ ಚಿಂತೆಯಿಲ್ಲ.. ನೀವು ಹೇಳಿರುವುದನ್ನೇ ನಾನು ಹೇಳುತ್ತಿದ್ದೇನೆ ಬೇರೆ ಏನೂ ಹೇಳುವುದಿಲ್ಲ. ನೀವು ಹೇಳಿರುವಂತೆ ಸರ್ಕಾರದ ಬಗ್ಗೆ ಮಾತ್ರ ಮಾತನಾಡುತ್ತೇನೆ, ಸದನದ ಸಮಿತಿಯ ಬಗ್ಗೆ ಮಾತನಾಡುವುದಿಲ್ಲ.... ಹೌದು, ಇದೇ ರೀತಿಯಲ್ಲಿ ಮಾತನಾಡುವುದು... 5-6 ವರ್ಷ ಸಂಸದೀಯ ಸಚಿವರಾಗಿದ್ದಾಗ, ಈ ಸಮಿತಿಯ ಕೆಲಸ ಏನು ಇದೆ ಅದನ್ನು ಮಾನಿಟರ್ ಮಾಡುತ್ತಿದ್ದೇನೆಂದು ತಾವು ಹೇಳಿದಿರಿ, ನಾನು ಆ ಕೆಲಸ ಮಾಡುವುದಕ್ಕೆ ಹೋಗುವುದಿಲ್ಲ....

ಶ್ರೀ ಎಂ.ವೀರಪ್ಪಮೊಯಿಲಿ: ನಾನು ಮಾಡಿರುವುದನ್ನು ಮಾಡುವುದಕ್ಕೆ ಹೋಗಬೇಡಿ...

(ಗೊಂದಲ)

SRI M.C.NANAIAH: You had your say. You allow me to speak. Let me speak now. ನೀವು ಮುಖ್ಯಮಂತ್ರಿಗಳಾಗಿ, ಸಂಸದೀಯ ಸಚಿವರಾಗಿ ಕೆಲಸ ಮಾಡಿದ್ದೀರಿ, ನಾನು ನೀವು ಮುಖ್ಯಮಂತ್ರಿಗಳಾಗಿರುವ ಬಗ್ಗೆ ಮಾತನಾಡುವುದಿಲ್ಲ. ನೀವು ಸಂಸದೀಯ ಸಚಿವರಾಗಿದ್ದಾಗ ಸಮಿತಿಯ ಕಾರ್ಯಗಳ ಬಗ್ಗೆ ಮಾನಿಟರ್ ಮಾಡುತ್ತಿದ್ದೇನೆಂದು ಹೇಳಿದಿರಿ, ನಿಮ್ಮ ಕಾಲದಲ್ಲಿ ಆ ಸಮಿತಿಯ ಸದಸ್ಯರು ನಿಮಗೆ ಅಧಿಕಾರ ಕೊಟ್ಟಿದ್ದರೆ, ನೀವು ಆಗ ಮಾನಿಟರ್ ಮಾಡಿರಬಹುದು. ನಾನು ಆ ಕೆಲಸವನ್ನು ಮಾಡುವುದಕ್ಕೆ ಹೋಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ತಾಂತ್ರಿಕತೆ ಬಗ್ಗೆ ಆಮೇಲೆ ಮಾತನಾಡಿ...

ಉಪಾಧ್ಯಕ್ಷರು: ನಾಗರಾಜ್‌ರವರೇ, ಒಬ್ಬರು ಮಾತನಾಡುವಾಗ ನೀವು ಮಾತನಾಡಿದರೆ ಹೇಗೆ? ಅವರು ಮುಗಿಸಲಿ, ಬೇಕಾದರೆ ಇನ್ನೊಂದು ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ: ಯಾವುದೇ ಸದನದ ಸಮಿತಿ ಅವರು ಮಾಡತಕ್ಕಂಥ ಕೆಲಸಕ್ಕೆ ಅವರ ಕೆಲಸಕ್ಕೆ ಈ ಸದನಕ್ಕೆ ಜವಾಬ್ದಾರರು, ಹಾಗೂ ಕೆಲವು ಸಂದರ್ಭದಲ್ಲಿ ಸಭಾಧ್ಯಕ್ಷರು ಮತ್ತು ಸದನಕ್ಕೂ ಸಂಬಂಧಪಟ್ಟಿರತಕ್ಕಂಥದ್ದು. ಇದು ಸಂಸದೀಯ ಸಚಿವರಿಗೆ ಸಂಬಂಧಪಟ್ಟಿರತಕ್ಕಂಥದ್ದು ಅಲ್ಲ... I am not prepared to encroach into the prerogatives of the Committee of the House. ಬಹುಶಃ ಹಿಂದೆ ನೀವು ಮಾಡಿದ್ದರೆ ಅದು ನಿಮ್ಮ ಪ್ರೆರೋಗೇಟಿವ್

ಇರಬಹುದು, ಅದು ನನ್ನ ಪ್ರೆರೋಗೇಟೀವ್ ಅಲ್ಲ.. ಮೊಯ್ಲಿಯವರು ನನ್ನ ಬಗ್ಗೆ ಹೇಳಿದ್ದಕ್ಕೆ ನಾನು ಉತ್ತರ ಹೇಳಿದೆ, ಬೇರೆ ಯಾವುದಕ್ಕೂ ಉತ್ತರ ಹೇಳಿಲ್ಲ. ಸಂಸದೀಯ ಸಚಿವನಾಗಿ ನಾನು ನನ್ನ ಕರ್ತವ್ಯವನ್ನು ಮಾಡುತ್ತಿದ್ದೇನೆ.

ಶ್ರೀ ಎಂ.ವೀರಪ್ಪಮೊಯಲಿ: ಬಂಡೆ ಮೇಲೆ ನೀರು ಹಾಕಿದರೆ ಏನು ಪ್ರಯೋಜನ? ಆ ರೀತಿ ಆಯಿತು.

SRI M.C.NANAIAH: I am not as ignorant as you are to understand the parliamentary system. I know something about this. ಬಂಡೆ ಮೇಲೆ ನೀರು ಹಾಕಿದರೆ ಏನು ಪ್ರಯೋಜನವೆಂದು ತಾವು ಹೇಳುತ್ತಿದ್ದೀರಿ, ಆಯಿತು, ನಿಮಗೆ ಗೊತ್ತಿದ್ದರೆ ನೀವು ಬಹಳ ಜ್ಞಾನಿಗಳು, ನಾನು ನಿಮ್ಮಷ್ಟು ಜ್ಞಾನಿಗಳಲ್ಲ.

(ಗೊಂದಲ)

ಉಪಾಧ್ಯಕ್ಷರು: ಅವರಿಗೆ ಮಾತನಾಡುವ ಹಕ್ಕು ಇಲ್ಲವೆ? ಈಶ್ವರಪ್ಪನವರೇ.. ಏಕೆ ಇದನ್ನು ಸುಮ್ಮನೆ ಬೆಳೆಸುತ್ತೀರಿ? ನಾನು ಜವಾಬ್ದಾರಿಯಿಂದ ಹೇಳುತ್ತಿದ್ದೇನೆ...

ಶ್ರೀ ವಾಟಾಳ್ ನಾಗರಾಜ್: ನಾಳೆ ಮಂಡಿಸುತ್ತಿರಾ?

ಉಪಾಧ್ಯಕ್ಷರು: ನನಗೆ ಇದರ ಬಗ್ಗೆ ಗೊತ್ತಿಲ್ಲ, ನಾನು ಹೇಗೆ ಹೇಳುವುದು ಅಧ್ಯಕ್ಷರು ಬಂದ ಮೇಲೆ ಗೊತ್ತಾಗುತ್ತದೆ..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ತಾವು ಜವಾಬ್ದಾರಿಯಲ್ಲಿರುವವರು ಗೊತ್ತಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾಳೆ ಆಗುವುದಿಲ್ಲವೆಂದರೆ, ಯಾವಾಗ ಮಂಡಿಸುತ್ತಿರಿ?

ಶ್ರೀ ಸಿದ್ಧರಾಮಯ್ಯ: ಅವರು ಸ್ಪೀಕರ್ ಜೊತೆಯಲ್ಲಿ ಮಾತನಾಡುತ್ತೇನೆಂದು ಹೇಳುತ್ತಿದ್ದಾರಲ್ಲ.

(ಗೊಂದಲ)

ಉಪಾಧ್ಯಕ್ಷರು: ನಾಳೆ ಬೆಳಿಗ್ಗೆ ಸದನ ಪ್ರಾರಂಭವಾದ ಮೇಲೆ ಸದನ ಸಮಿತಿಯ

ಅಧ್ಯಕ್ಷರಿಂದ ಉತ್ತರ ಕೊಡಿಸುತ್ತೇನೆ. ನಾವು ಸುಮ್ಮನೆ ಏಕೆ ಇದನ್ನು ಬೆಳೆಸುವುದು? ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ ಬೆಳಿಗ್ಗೆ 10-30ಕ್ಕೆ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 6 ಗಂಟೆ 8 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: 24ನೇ ಏಪ್ರಿಲ್ 1998ರ ಶುಕ್ರವಾರದಂದು ಬೆಳಿಗ್ಗೆ 10-30ಕ್ಕೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)